ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014-15 : ಮೇ 26, 2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಮಾಜಿ ಪ್ರಧಾನ ಮಂತ್ರಿ ದಿವಂಗತ ಜವಹರ್‌ಲಾಲ್ ನೆಹರು ಅವರ 51 ನೇ ಪುಣ್ಯ ತಿಥಿ ಅಂಗವಾಗಿ ಅವರ <u>ಭಾವಚಿತ್ರಕ್ಕೆ ಮಾಲಾರ್ಪಣೆ:</u><br>ಶ್ರೀ ಸಿದ್ದರಾಮಯ್ಯ,<br>ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ | 27-5-2015<br>ಬುಧವಾರ<br>ಬೆಳಗ್ಗೆ<br>10-00 ಗಂಟೆಗೆ | ವಿಧಾನ ಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಮಾಜಿ ಪ್ರಧಾನ ಮಂತ್ರಿ ದಿವಂಗತ ಜವಹರ್‌ಲಾಲ್ ನೆಹರು ಪ್ರತಿಮೆ ಬಳಿ |
| 2 | <u>ಪತ್ರಿಕಾಗೋಷ್ಠಿ</u>:<br>ತೋಟಗಾರಿಕೆ ಇಲಾಖೆ ನಿರ್ದೇಶಕರು ಬೆಂಗಳೂರು<br>ಮಾವು ಮತ್ತು ಹಲಸು ಹಣ್ಣಿನ ಮಾರಾಟ ಮೇಳ ಹಾಗೂ ಪ್ರದರ್ಶನ ಕುರಿತು | 27-5-2015<br>ಬುಧವಾರ<br>ಮಧ್ಯಾಹ್ನ<br>1-00 ಗಂಟೆಗೆ | ಮಿನಿ ಮೀಟಿಂಗ್ ಹಾಲ್,<br>ತೋಟಗಾರಿಕೆ ನಿರ್ದೇಶನಾಲಯ,<br>ಲಾಲ್‌ಬಾಗ್,<br>ಬೆಂಗಳೂರು |
| 3 | ತಲ್ಲಣಿಸದಿರು ಕಂಡ್ಯ ತಾಳುಮನವೆ:<br>ಕನಕದಾಸರ ಚಿಂತನೆ ಮತ್ತು ಅಭಿವ್ಯಕ್ತಿ ಕುರಿತಾದ ವಿಚಾರ ಸಂಕಿರಣ:<br><br><u>ವಿಚಾರ ಮಂಡನೆ:</u><br><br>ಡಾ: ಸಿ. ವೀರಣ್ಣ,<br>ಚಿಂತಕರು, ವಿಮರ್ಷಕರು<br><br>ಚಂದ್ರಶೇಖರ ತಾಳ್ಯ,<br>ಕವರಿ, ಚಿಂತಕರು<br><br>ಡಾ: ಎಚ್.ಎಸ್. ಅನುಪಮಾ<br>ಚಿಂತಕಿ, ಲೇಖಕಿ, ವೈದ್ಯೆ<br><br>ಕಾ. ತ. ಚಿಕ್ಕಣ್ಣ,<br>ಕಥೆಗಾರ, ವಿರ್ಮಕ | 27-05-2015<br>ಬುಧವಾರ<br>ಮಧ್ಯಾಹ್ನ<br>3-30 ಗಂಟೆಗೆ | ಖಿಂಚ ಸಭಾಂಗಣ,<br>ಭಾರತೀಯ ವಿಧ್ಯಾಭವನ,<br>ರೇಸ್‌ಕೋರ್ಸ್ ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಕ್ರೀಡಾಪಟುಗಳಿಗೆ ನಗದು ಬಹುಮಾನ

ಬೆಂಗಳೂರು, ಮೇ 26 (ಕರ್ನಾಟಕ ವಾರ್ತೆ)

2014-15 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸಲಾದ ರಾಜ್ಯಮಟ್ಟದ ಶಾಲಾ ಕ್ರೀಟಕೂಟಗಳಲ್ಲಿ ಹಾಗೂ ಎಸ್.ಜಿ.ಎಫ್.ಐ. ಸಂಸ್ಥೆಯು ಸಂಘಟಿಸಿದ್ದ 60 ನೇ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಶಾಲಾ ಕ್ರೀಡಾಪಟುಗಳಿಗೆ ನಗದು ಬಹುಮಾನ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರಥಮ/ದ್ವಿತೀಯ/ತೃತೀಯ ಸ್ಥಾನ ಗಳಿಸಿರುವ ಕ್ರೀಡಾಪಟುಗಳು ನಿಗದಿತ ಅರ್ಜಿ ನಮೂನೆಯನ್ನು ಆಯಾ ಜಿಲ್ಲೆಗಳ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಪ ನಿರ್ದೇಶಕರ ಕಚೇರಿ ಇವರಿಂದ ಪಡೆದು ದಿನಾಂಕ 25-6-2015 ರ ಒಳಗೆ ಸಲ್ಲಿಸಲು ನಿರ್ದೇಶಕರು (ಪ್ರೌಢ ಶಿಕ್ಷಣ) ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆಪ್ಟೆಂಬರ್ 6 ರಿಂದ ಬೆಂಗಳೂರಿನಲ್ಲಿ<br>ಪಾಟಾ ಪ್ರವಾಸಿ ಮೇಳ

ಬೆಂಗಳೂರು, ಮೇ 26 (ಕರ್ನಾಟಕ ವಾರ್ತೆ)

ಪ್ರವಾಸೋದ್ಯಮ ಇಲಾಖೆಯು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಸಹಯೋಗದೊಂದಿಗೆ ಪೆಸಿಫಿಕ್ ಏಷ್ಯಾ ಟ್ರಾವೆಲ್ಸ್ ಅಸೋಸಿಯೇಷನ್ (ಪಾಟಾ) ಪ್ರವಾಸಿ ಮೇಳ – 2015 ಅನ್ನು ಸೆಪ್ಟೆಂಬರ್ 6 ರಿಂದ 8 ರವರೆಗೆ ಮೂರು ದಿನಗಳ ಕಾಲ ನಡೆಸಲು ಉದ್ದೇಶಿಸಲಾಗಿದೆ ಎಂದು ಪ್ರವಾಸೋದ್ಯಮ ಸಚಿವ ಆರ್. ವಿ. ದೇಶಪಾಂಡೆ ಅವರು ತಿಳಿಸಿದರು.

ಈ ಕುರಿತು ಮಾಹಿತಿ ನೀಡುವ ಸಲುವಾಗಿ ಹೋಟೆಲ್ ಲಲಿತ್ ಅಶೋಕ್‌ನಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಸಚಿವರು ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಅಂತರಾಷ್ಟ್ರೀಯ ಮಟ್ಟದ 38ನೇ ಪಾಟಾ ಪ್ರವಾಸಿ ಮೇಳವನ್ನು ಬೆಂಗಳೂರು ಅಂತರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಲಾಗುತ್ತಿದೆ ಎಂದರು.

ಮೇಳ ಹಾಗೂ ಸಮ್ಮೇಳನವನ್ನು ಸೆಪ್ಟೆಂಬರ್ 6 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟನೆ ಮಾಡಲಿದ್ದು ಮೂರು ದಿನಗಳ ಕಾಲ ನಡೆಯುವ ಪಾಟಾ ಪ್ರವಾಸಿ ಮೇಳದಲ್ಲಿ 60 ರಿಂದ 70 ಕ್ಕೂ ಅಧಿಕ ದೇಶಗಳಿಂದ ಸಾವಿರಕ್ಕೂ ಹೆಚ್ಚು ಗಣ್ಯ ವ್ಯಕ್ತಿಗಳು ಭಾಗವಹಿಸಲಿದ್ದು, ಹತ್ತು ಸಾವಿರಕ್ಕೂ ಅಧಿಕ ಪೂರ್ವ ನಿಯೋಜಿತ ಭೇಟಿಗಳು ಈ ಮೇಳದಿಂದ ಏರ್ಪಡಲಿದೆ, ಹಾಗೂ ವಿವಿಧ ದೇಶದ ಪ್ರಯಾಣ ಮತ್ತು ಪ್ರವಾಸ ಕ್ಷೇತ್ರ ಖರೀದಿದಾರರು, ಮಾರಾಟಗಾರರು ಈ ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಮುಖ್ಯಮಂತ್ರಿಯವರು ಆಯವ್ಯಯದಲ್ಲಿ ಘೋಷಿಸಿದಂತೆ 250 ಕೋಟಿ ರೂ. ವೆಚ್ಚದಲ್ಲಿ ಪಾಟಾ ಪ್ರವಾಸಿ ಮೇಳ-2015 ಅನ್ನು ಆಯೋಜಿಸಲಾಗುತ್ತಿದೆ. ಈ ಮೇಳದಿಂದ ರಾಜ್ಯದಲ್ಲಿರುವ ಒಟ್ಟು 390 ಪ್ರೇಕ್ಷಣೀಯ ಸ್ಥಳಗಳ ಮೂಲ ಸೌಕರ್ಯ ಅಭಿವೃದ್ಧಿಗೆ ಸಹಾಯಕವಾಗಲಿದೆಯಲ್ಲದೆ, ಪ್ರಯಾಣ, ಪ್ರವಾಸೋದ್ಯಮ ಮತ್ತು ಹೋಟೆಲ್ ಕ್ಷೇತ್ರದ ಉದ್ಯಮಿಗಳಿಗೆ ವಿವಿಧ ವಿಷಯಗಳ ಕುರಿತು ಕಲಿಯಲು ಅವಕಾಶ ದೊರೆಯಲಿದ್ದು, ನಮ್ಮ ರಾಜ್ಯದ ಪ್ರಮುಖ ಆಹಾರ ಉತ್ಪನ್ನಗಳು, ಕರಕುಶಲ ವಸ್ತುಗಳ ಬಗ್ಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಪರಿಚಯ ಮಾಡುವ ಅವಕಾಶ ದೊರೆಯಲಿದೆ ಎಂದು ಸಚಿವರು ತಿಳಿಸಿದರು.

ಬೇರೆಲ್ಲಾ ಕ್ಷೇತ್ರಗಳಿಗಿಂತ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಅಧಿಕ ಸಂಖ್ಯೆಯಲ್ಲಿ ಉದ್ಯೋಗಾವಕಾಶವಿರುವ ಹಿನ್ನೆಲೆಯಲ್ಲಿ ಈ ಮೇಳದ ಮೂಲಕ ನಿರುದ್ಯೋಗ ನಿವಾರಣೆ, ಪ್ರವಾಸಿ ತೆರಿಗೆ ಮೂಲಕ ಸರ್ಕಾರದ ಬೊಕ್ಕಸಕ್ಕೆ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪ್ರಯಾಣ ಮತ್ತು ಪ್ರವಾಸಿ ಕ್ಷೇತ್ರದ ಸಂಸ್ಥೆಗಳ ನಡುವೆ ಪರಸ್ಪರ ಸಂಪರ್ಕ

ಸಾಧಿಸಲು ಮತ್ತು ರಾಜ್ಯದ ಪ್ರವಾಸಿ ತಾಣಗಳಿಗೆ ಹೊಸ ಪ್ರೇಕ್ಷಕರನ್ನು ಆಕರ್ಷಿಸಲು ಈ ಮೇಳವು ಸಹಾಯಕವಾಗಲಿದೆ. ಅಲ್ಲದೆ ಪ್ರವಾಸೋದ್ಯಮ ಹೂಡಿಕೆಗೆ ಕೂಡ ವೇದಿಕೆ ದೊರೆತಂತಾಗುತ್ತದೆ ಎಂದು ಸಚಿವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಟಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಮೊರಿಯೋ ಹಾರ್ಟ್ಜ್, ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಸಿಂಗ್ ಖರೋಲಾ, ಕೆ.ಎಸ್.ಟಿ.ಡಿ.ಸಿಯ ಅಧ್ಯಕ್ಷರಾದ ಹುಸೇನ್, ಜಂಗಲ್ ಲಾಡ್ಜ್ಸ್‌ನ ಅಧ್ಯಕ್ಷರಾದ ಜಯಸಿಂಹ, ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾದ ಸತ್ಯವತಿ, ಕೆ.ಎಸ್.ಟಿ.ಡಿ.ಸಿ. ವ್ಯವಸ್ಥಾಪಕ ನಿರ್ದೇಶಕ ಹರ್ಷ, ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಪಹೊ:ಪೂರ್ಣಿಮ:ಜಿಪಿಆರ್.